ಆ) ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಹಾಗೂ ಕಲ್ಲೋಳ ಗ್ರಾಮಗಳಲ್ಲಿ ಜಲ ನಿರ್ಮಲ ಯೋಜನೆಯ ಕಾಮಗಾರಿಗಳು ಮಂಜೂರಾಗಿ ಎಷ್ಟು ವರ್ಷವಾಯಿತು:

ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಮಂಜೂರಾಗಿ ಸುಮಾರು 2 ವರ್ಷ 10 ತಿಂಗಳುಗಳಾಗಿದೆ. ಹಾಗೂ ಕಲ್ಲೋಳ ಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಮಂಜೂರಾಗಿ ಸುಮಾರು 2 ವರ್ಷ 9 ತಿಂಗಳುಗಳಾಗಿದೆ.

ಇ) ಈ ಎರಡು ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆಯೇ;

ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಹಾಗೂ ಕಲ್ಲೋಳ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯ ಮುಕ್ತಾಯದ ಹಂತದಲ್ಲಿರುತ್ತದೆ.

ಈ) ಕಾಮಗಾರಿಗಳು ಪೂರ್ಣಗೊಳ್ಳದೇ ಇದ್ದಲ್ಲಿ, ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯನ್ನು ಮಾರ್ಚ್-2009 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸಂಖ್ಯೆ: ಗ್ರಾಅಪ/ಕನೀಸಂ/405/2009

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಕರ್ನಾಟಕ ವಿಧಾನ ಸಭೆ

162ಶ್ರೀ ಸಿದ್ದು ಸವದಿ (ತೇರದಾಳ್)
ಇಂಧನ ಸಚಿವರು.

****

ಅ) ರಾಜ್ಯದಲ್ಲಿರುವ ಒಟ್ಟು ವಿದ್ಯುತ್ತಿನ ಬೇಡಿಕೆ ಎಷ್ಟು; ಉತ್ಪಾದನೆ ಎಷ್ಟು;

2008-09ನೇ ಸಾಲಿನಲ್ಲಿ ರಾಜ್ಯದ ಅಂದಾಜಿಸಲಾದ ಒಟ್ಟು ವಿದ್ಯುತ್ತಿನ ಬೇಡಿಕೆ 46,965 ದಶಲಕ್ಷ ಯೂನಿಟ್ಟುಗಳು ಹಾಗೂ ರಾಜ್ಯದ ಆಂತರಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆ 23,450 ಮಿಲಿಯನ್ ಯೂನಿಟ್ಟುಗಳು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಕೇಂದ್ರಗಳಿಂದ ಲಭ್ಯವಾಗುವ ರಾಜ್ಯದ ಪಾಲು 11,500 ಮಿಲಿಯನ್ ಯೂನಿಟ್ಟುಗಳು.

ಆ) ಈ ಕೊರತೆಯನ್ನು ಯಾವ ರೀತಿ ಸರಿದೂಗಿಸಲಾಗುವುದು; ಈ ಸಮಸ್ಯೆಯನ್ನು ಯಾವಾಗ ಸರಿಪಡಿಸಲಾಗುವುದು;

ವಿದ್ಯುತ್ ಅಭಾವ ನೀಗುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕರ್ನಾಟಕ ಸರ್ಕಾರವು ದಿನಾಂಕ 17–12–2008 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
2. ಕರ್ನಾಟಕ ಸರ್ಕಾರವು ದಿನಾಂಕ 30–12–2008 ರಂದು ಆದೇಶ ಹೊರಡಿಸಿ ಎಲ್ಲಾ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
3. ಇದರ ಜೊತೆಗೆ ರಾಜ್ಯವು ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮುಖಾಂತರ ಮತ್ತು ಹೊರ ರಾಜ್ಯವಾದ ಛತ್ತೀಸ್‌ಗಢ್ ದಿಂದ ವಿದ್ಯುತ್ತನ್ನು ಪಡೆಯುತ್ತಿದೆ .
4. ಈ ರೀತಿಯಾಗಿ ಹೆಚ್ಚುವರಿ ವಿದ್ಯುತ್ತಿಗೆ ನವೆಂಬರ್–2008 ರಿಂದ ಜನವರಿ–2009 ರವರೆಗೆ 1008 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಕರ್ನಾಟಕ ಸರ್ಕಾರದಿಂದ 35 ಕೋಟಿ ರೂ.ಗಳನ್ನು ನೀಡಲಾಗಿದೆ.

ಇ) ಯಾವ ಮೂಲಗಳಿಂದ ಉತ್ಪಾದನೆ ಮತ್ತು ಖರೀದಿ ಮಾಡಲಾಗುವುದು ಹಾಗೂ ಬೇಡಿಕೆ ಮತ್ತು ಪೂರೈಕೆಯಲ್ಲಿರುವ ವ್ಯತ್ಯಾಸವನ್ನು ಕಂಪನಿವಾರು ಮಾಹಿತಿ ಕೊಡುವುದು;

ವಿವಿಧ ಮೂಲಗಳಿಂದ ದಿನವಹಿ ವಿದ್ಯುತ್ ಉತ್ಪಾದನೆ ಮತ್ತು ಖರೀದಿಯಿಂದ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ ವಿವರಗಳು ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಮೂಲ	ಲಭ್ಯತೆ ದಶಲಕ್ಷ ಯೂನಿಟ್ಟುಗಳಲ್ಲಿ
1	ಕರ್ನಾಟಕ ವಿದ್ಯುತ್ ನಿಗಮ (ಜಲ ವಿದ್ಯುತ್)	30

2	ಕರ್ನಾಟಕ ವಿದ್ಯುತ್ ನಿಗಮ (ಶಾಖೊತ್ಪನ್ನ)	40
3	ಕೇಂದ್ರ ವಿದ್ಯುತ್ ಜಾಲದಿಂದ	32
4	ಸ್ವತಂತ್ರ ಬೃಹತ್ ವಿದ್ಯುತ್ ಉತ್ಪಾದಕರಿಂದ	02
5	ಅಸಂಪ್ರದಾಯಕ ಇಂಧನ ಮೂಲಗಳಿಂದ	08
6	ರಾಜ್ಯದಲ್ಲಿರುವ ಖಾಸಗಿ ಬೃಹತ್ ವಿದ್ಯುತ್ ಉತ್ಪಾದಕರಿಂದ	09
7	ಛತ್ತೀಸ್‌ಗಢ ಮತ್ತು ಇಂಡಿಯನ್ ಎನರ್ಜಿ ಎಕ್ಸ್ ಚೇಂಜ್ ಮುಖಾಂತರ	04
	ಒಟ್ಟು	**125**

ಈ) ಎಂದಿನಿಂದ ಕೊರತೆ ಉಂಟಾಯಿತು ಮತ್ತು ವರ್ಷವಾರು ಉತ್ಪಾದಿಸಿದ ಮಾಹಿತಿ ನೀಡುವುದು;

ಕರ್ನಾಟಕ ರಾಜ್ಯದಲ್ಲಿ 2008 ರಲ್ಲಿ ಮುಂಗಾರು ಮಳೆ ವಿಫಲತೆಯಿಂದ ವಿದ್ಯುತ್ ಅಭಾವ ಪರಿಸ್ಥಿತಿ ಉಂಟಾಯಿತು. ಆದ್ದರಿಂದ, 2008, 2009ನೇ ವರ್ಷಗಳಲ್ಲಿ ಹಿಂದಿನ ವರ್ಷಗಳಿಗಿಂತ ಹೆಚ್ಚಾಗಿ ಕೊರತೆ ಉಂಟಾಗಿದೆ.

ಕಳೆದ 5 ವರ್ಷಗಳಲ್ಲಿ ರಾಜ್ಯಕ್ಕೆ ವಿದ್ಯುತ್ ಸರಬರಾಜು ಮಾಡಲಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ.

ವರ್ಷ	ಸರಬರಾಜು ಮಾಡಲಾದ ವಿದ್ಯುತ್ತಿನ ಪ್ರಮಾಣ ದಶಲಕ್ಷ ಯೂನಿಟ್ಟುಗಳಲ್ಲಿ
2004–2005	33,110
2005–2006	34,250
2006–2007	40,379
2007–2008	40,195
2008–2009	41,185*

* ಅಂದಾಜಿಸಿರುವುದು

ಉ) ರೈತರ ಪಂಪ್ ಸೆಟ್ಟುಗಳಿಗೆ ಕಡಿಮೆ ವಿದ್ಯುತ್ ಪೂರೈಕೆಯಿಂದ ಆರ್ಥಿಕ ತೊಂದರೆ ಆಗುವುದಿಲ್ಲವೇ?

ರಾಜ್ಯದ ರೈತರಿಗೆ ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ. ಈ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರದಿಂದ 2008–09ರ ಅವಧಿಗೆ 500 ಕೋಟಿ ರೂಪಾಯಿ ನಿಗಧಿ ಪಡಿಸಿ ದಿನಾಂಕ: 7.2.2009 ರ ಅಂತ್ಯಕ್ಕೆ ರೂ.231.25 ಕೋಟಿ ಪ್ರತ್ಯೇಕವಾಗಿ ಸಹಾಯಧನ ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ: ಇಎನ್ 13 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
(ಇಂಧನ ಸಚಿವರು)

ಕರ್ನಾಟಕ ವಿಧಾನ ಸಭೆ

163 ಶ್ರೀ ಸಿದ್ದು ಸವದಿ (ತೇರದಾಳ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ತೇರದಾಳ್ ಮತಕ್ಷೇತ್ರದಲ್ಲಿ 04 ಜೂನಿಯರ್ ಕಾಲೇಜು ಮತ್ತು 5 ಪ್ರೌಢ ಶಾಲೆಗಳ ಬೇಡಿಕೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಬಂದಿದ್ದರೆ, ಎಂದಿನಿಂದ ಮಂಜೂರಾತಿ ನೀಡಲಾಗುವುದು; ಇಲ್ಲವಾದಲ್ಲಿ ಗ್ರಾಮೀಣ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುವುದಿಲ್ಲವೆ;

ಸ್ಥಳೀಯ ಶೈಕ್ಷಣಿಕ ಅಗತ್ಯತೆ ಮತ್ತು ಸಂಪನ್ಮೂಲದ ಲಭ್ಯತೆಯ ಆಧಾರದ ಮೇಲೆ ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಇ) ಈ ಕ್ಷೇತ್ರದಲ್ಲಿ ಅನೇಕ ಪ್ರೌಢ ಶಾಲೆ ಮತ್ತು ಕಾಲೇಜುಗಳಿಗೆ ಕಟ್ಟಡದ ಕೊರತೆಯಿರುವುದರಿಂದ ಸದರಿ ಕಟ್ಟಡವನ್ನು ಎಂದಿನಿಂದ ನಿರ್ಮಿಸಲಾಗುವುದು?

ಸರ್ಕಾರಿ ಪದವಿ ಪೂರ್ವ ಕಾಲೇಜು, ನವಲಗಿ, ಜಮಖಂಡಿ ತಾಲ್ಲೂಕು, ಕೇಸರಕೊಪ್ಪ, ಮುಧೋಳ ತಾಲ್ಲೂಕು ಮತ್ತು ಮಹಾಲಿಂಗಪುರ, ಮುಧೋಳ ತಾಲ್ಲೂಕು ಈ ಕಾಲೇಜುಗಳಿಗೆ ಆರ್.ಐ.ಡಿ.ಎಫ್–14 ರಡಿ ಕಟ್ಟಡಗಳು ಮಂಜೂರಾಗಿದ್ದು, ಕಟ್ಟಡ ನಿರ್ಮಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು. ಪ್ರೌಢಶಾಲೆಗೆ ಸಂಬಂಧಿಸಿದಂತೆ (1) ಸರ್ಕಾರಿ ಉರ್ದು ಪ್ರೌಢಶಾಲೆ ಹನೆಗಂಡಿಯಲ್ಲಿ 5 ಕೊಠಡಿ (2) ಸರ್ಕಾರಿ ಪ್ರೌಢಶಾಲೆ, ಮದಬಾವಿಯಲ್ಲಿ 5 ಕೊಠಡಿ (3) ಸರ್ಕಾರಿ ಪ್ರೌಢಶಾಲೆ, ಡವಳೇಶ್ವರದಲ್ಲಿ 2 ಕೊಠಡಿ (4)